**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಪೂರ.**

**ಅಪರಾಧಿಕ ಪ್ರಕರಣ ಸಂಖ್ಯೆ: 1413/2022**

**ಫಿರ್ಯಾಧಿದಾರರು:- ಸರ್ಕಾರದ ಪರವಾಗಿ ಗೋಗಿ ಪೋಲಿಸ ಠಾಣೆ**

**:: ವಿರುದ್ಧ ::**

**ಆರೋಪಿತರು :- ಶ್ರೀಶೈಲ ಮತ್ತು ಇನ್ನೊಬ್ಬ**

| | |
|---|---|
| 1. | **ಶ್ರೀಶೈಲ ತಂದೆ ಹಣಮಂತ ನಾಯಿಕೋಡಿ , ವ: 20 ವರ್ಷ, ಉ: ಅಟೋ ಚಾಲಕ, ಸಾ: ಸುಂಬಡ, ತಾ: ಯಡ್ರಾಮಿ, ಜಿ: ಕಲಬುರ್ಗಿ.** |
| 2. | **ಮಲ್ಲಿಕಾರ್ಜುನ ತಂದೆ ಮಾರುತಿ ತಳವಾರ, ವ: 45 ವರ್ಷ, ಉ: ಕೂಲಿ ಕೆಲಸ, ಸಾ: ಬೆಡಪಳ್ಳಿದ ತಾ: ಚಿಂಚೋಳಿ, ಜಿ: ಕಲಬುರ್ಗಿ.** |

**:: ಆಪಾದನೆ ::**

ದಿನಾಂಕ: 04.04.2022 ರಂದು ಸಾ: 6-30 ಗಂಟೆ ಸುಮಾರಿಗೆ ಗೋಗಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಶಹಾಪೂರ -ಸಿಂದಗಿ ಮುಖ್ಯ ರಸ್ತೆಯಲ್ಲಿ ಗೋಗಿ ಗ್ರಾಮ ದಾಟಿ ರಬ್ಬನಳ್ಳಿ ಕ್ರಾಸ ಇನ್ನೂ 300 ಮೀಟರ ದೂರ ಇರುವಾಗ ಶರಮುದ್ದಿನ ಸಾಹುಕಾರ ರವರ ಹೊಲದ ಹತ್ತಿರ ರಸ್ತೆಯ ಮೇಲೆ ಪರೇಶಕುಮಾರ ತಂದೆ ನವೀನಚಂದ್ರ ಪಟೇಲ ಇವರು ಚಾಸಾ 1 ರವರ ಮಾಲಿಕತ್ವದಲ್ಲಿದ್ದ ಹೊಂಡಾ ಅಕ್ಟಿವಾ ಸ್ಕೂಟಿ ನಂ. ಕೆಎ-33-ಕ್ಯೂ-5615 ನೇದ್ದರಲ್ಲಿ ಚಾಸಾ 1 ರವರಿಗೆ ಕೂಡಿಸಿಕೊಂಡು ಯಾದಗಿರಿದಿಂದ ಬಿಜಾಪೂರಕ್ಕೆ ಹೋಗುತ್ತಿದ್ದಾಗ ಮುಂದುಗಡೆ 1 ಮತ್ತು 2 ನೇ ಆರೋಪಿತರಾದ ನೀವು ನಿಮ್ಮ ಬಜಾಜ ಕಂಪನಿಯ ಟಂಟಂ ನಂ. ಕೆಎ-32-ಸಿ-2637 ನೇದ್ದರಲ್ಲಿ ಚಾಸಾ 9 ಮತ್ತು 10 ರವರು ಕೂಡಕೊಂಡು ತನ್ನ ಊರಾದ ಸುಂಬಡ ಗ್ರಾಮಕ್ಕೆ ಹೋಗುತ್ತಿದ್ದಾಗ 1 ನೇ ಆರೋಪಿತನು ಅಟೋದ ಬಲಗಡೆ ಸೈನಿಂದ ಮುಂದುಗಡೆ ಸ್ಕೂಟಿ ಚಲಾಯಿಸಿಕೊಂಡು ಹೋಗುತ್ತಿದ್ದಾಗ 1 ನೇ ಆರೋಪಿತನು ವಾಹನ ಚಾಲನೆ ಮಾಡಲು ನಿಗಧಿತ ಚಾಲನಾ ಪರವಾನಿಗೆ ಪತ್ರ ಹೊಂದದೆ, ವಾಹನದ ಪರ್ಮಿಟ್ ವ್ಯಾಪ್ತಿ ಮೀರಿ, ತನ್ನ ವಾಹನವನ್ನು ಅತಿವೇಗ ಮತ್ತು ಅಲಕ್ಷತನದಿಂದ ಚಲಾಯಿಸಿಕೊಂಡು ಹೋಗಿ ಸಿಗ್ನಲ್ ನೀಡದೆ ಬಲಭಾಗಕ್ಕೆ ಚಲಾಯಿಸಿ ಪಕ್ಕದಲ್ಲಿ ಹೋಗುತ್ತಿದ್ದ ಸ್ಕೂಟಿಗೆ ಡಿಕ್ಕಿ ಪಡಿಸಿದ್ದರಿಂದ ಪರೇಶಕುಮಾರ ರವರಿಗೆ ತಲೆಗೆ ಭಾರಿ ಒಳಪೆಟ್ಟಾಗಿ, ಕಿವಿಯಿಂದ, ಬಾಯಿಂದ ರಕ್ತ ಬಂದಿದ್ದು ಉಪಚಾರಕ್ಕೆ ಆಸ್ಪತ್ರೆ ಶಹಾಪೂರಕ್ಕೆ ಹೋಗುವಾಗ ಮಾರ್ಗಮಧ್ಯೆ ದಿ: 04.04.2022 ರಂದು ರಾ: 7.00 ಗಂಟೆಗೆ ಮೃತ ಪಟ್ಟಿದ್ದು ಹಾಗೂ 2 ನೇ ಆರೋಪಿತನು ತನ್ನ ವಾಹನಕ್ಕೆ ವಿಮೆ ಮಾಡಿಸದೆ ವಾಯು ಮಾಲಿನ್ಯ ತಪಾಸಣೆ ಪತ್ರ ಹೊಂದದೆ ಪರ್ಮಿಟ್ ಹೊಂದದೆ, ಚಾಲನಾ ಪತ್ರ ಇಲ್ಲದೆ ಇದ್ದರೂ ಸಹ ತನ್ನ ಮಾಲಿಕತ್ವವನ್ನು ಚಾಲನೆ ಮಾಡಲು ಅನುಮಾತಿ

ನೀಡಿದ್ದು ಈ ಮೂಲಕ ಆರೋಪಿತರಾದ ನೀವು ಭಾ. ದಂ. ಸಂ. ಕಲಂ. 279, 337, 304(ಎ) ಸಹ ಮೊ.ವಾ.ಕಾಯ್ದೆ ಕಲಂ.181, 180, 196, 192(ಎ), 192(2) ರಡಿಯಲ್ಲಿ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿತಿರಿಗೆ ಓದಿ ಹೇಳಲಾಯಿತು.)

**ದಿನಾಂಕಃ 11-07-2023**

11-7-23

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.ಗಳು, ಶಹಾಪೂರ.**

**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಪೂರ.**

**ಸಿ.ಸಿ.ನಂ. 1413/2022**

ಪ್ರ.1ಃ- ನಿನಗೆ ಮೇಲಿನ ಹೇಳಿಕೆಯನ್ನು ಓದಿ ತಿಳಿಸಿ ಹೇಳಿದ್ದು ತಿಳಿಯಿತೆ?

1 ನೇ ಆರೋಪಿ ಉತ್ತರಃ- ತಿಳಿಯಿತು

ಪ್ರ.2ಃ- ನೀನು ಮೇಲಿನ ಹೇಳಿಕೆಯನ್ನು ಒಪ್ಪಿಕೊಳ್ಳುತ್ತಿಯಾ ಅಥವಾ ವಿಚಾರಣೆಯಾಗಬೇಕೆ?

1 ನೇ ಆರೋಪಿ ಉತ್ತರಃ- ವಿಚಾರಣೆಯಾಗಬೇಕು

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿತಿರಿಗೆ ಓದಿ ಹೇಳಲಾಯಿತು.)

11.7.23

**ದಿನಾಂಕಃ 11-07-2023**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.ಗಳು, ಶಹಾಪೂರ.**